**ದಿನಾಂಕಃ 17.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ–**

7. ನಂತರ ನಮ್ಮ ಠಾಣಾ ಮಹಿಳಾ ಸಿಬ್ಬಂದಿ ಪುಷ್ಪಲತಾರವರು ಪಂಚಃ–1 ರವರಿಂದ ನೋಟುಗಳನ್ನು ಪಡೆದು ಮೇಲ್ಕಂಡ 2 ಬದಿಗಳಲ್ಲಿ ಪಿನಾಪ್ತಲೀನ್ ಪುಡಿಗಳನ್ನು ಹಚ್ಚಿ, ಸದರಿ ನೋಟುಗಳನ್ನು ಪಂಚ–1 ರವರಿಗೆ ನೀಡಿ, ಅವುಗಳ ಕ್ರಮಸಂಖ್ಯೆಗಳನ್ನು ಪರಿಶೀಲಿಸುವಂತೆ

ಸೂಚಿಸಿ ಅವು ಸರಿ ಇದೆ ಎಂದು ಖಚಿತಪಡಿಸಿಕೊಳ್ಳಲಾಯಿತು. ನೋಟುಗಳನ್ನು ಪಂಚ–1 ರವರ ಮುಖಾಂತರ ಪಿರ್ಯಾದುದಾರರ ಒಂದು ಪ್ಲಾಸ್ಟಿಕ್ ಕವರಿನಲ್ಲಿ ಇರಿಸಲಾಯಿತು. ಸದರಿ ಕವರಿನಲ್ಲಿ ಲಂಚದ ಹಣವನ್ನು ಹೊರತುಪಡಿಸಿ, ಬೇರೆ ಯಾವುದೇ ಹಣ ಮತ್ತು ವಸ್ತುಗಳು ಇರಲಿಲ್ಲ. ನಂತರ ನೋಟಿನ ವಿವರದ ಹಾಳೆಯನ್ನು ಪಂಚ–1 ರವರಿಗೆ ನೀಡಿ, ಅವರು ಬಳಿ ಇಟ್ಟುಕೊಳ್ಳುವಂತೆ ತಿಳಿಸಿ, ಆರೋಪಿತರು ಹಣ ಸ್ವೀಕರಿಸಿದ ನಂತರ ಸದರಿ ನೋಟುಗಳೊಂದಿಗೆ ತಾಳೆ ಮಾಡುವಂತೆ ಸೂಚಿಸಲಾಯಿತು.

8. ಮೇಲ್ಕಂಡ ನೋಟುಗಳಿಗೆ ಲೇಪನ ಮಾಡಿ ಉಳಿದಿದ್ದ ಪಿನಾಪ್ತಲೀನ್ ಪುಡಿಯನ್ನು ನೋಟುಗಳಿಗೆ ಲೇಪನ ಮಾಡಿ ಉಳಿದ ಪಿನಾಪ್ತಲಿನ್ ಪುಡಿಯನ್ನು ಒಂದು ಬಿಳಿ ಪೇಪರ್ ನಲ್ಲಿ ಪೊಟ್ಟಣ ಕಟ್ಟಿ , ನಂತರ ಒಂದು ಕವರ್ ನಲ್ಲಿ ಹಾಕಿ ಅಂಟಿಸಿ, **A** ಎಂಬ ಅಕ್ಷರದಿಂದ ಸೀಲ್ ಮಾಡಲಾಯಿತು. ಸದರಿ ವಸ್ತುವನ್ನು **Article** –1 ಎಂದು ಗುರುತಿಸಲಾಯಿತು. ಅದಕ್ಕೆ ನಾವು ಮತ್ತು ಪಂಚರು ಸಹಿ ಹಾಕಿರುತ್ತೇವೆ. ಸದರಿ ವಸ್ತುವನ್ನು ಈಗಾಗಲೇ ಎಂಒ–2 ಎಂದು ಗುರುತಿಸಲಾಗಿದ್ದು , ಸಾಕ್ಷಿಯೂ ತನ್ನ ಸಹಿಯನ್ನು ಗುರುತಿಸಿರುತ್ತಾರೆ.

9. ನಂತರ ಠಾಣಾ ಸಿಬ್ಬಂದಿ ಚಾಸಾ.16 ರವರಿಗೆ ಒಂದು ಶುದ್ದೀಕರಿಸುವ ಒಂದು ಪ್ಲಾಸ್ಟಿಕ್ ಗ್ಲಾಸ್ ನಲ್ಲಿ ಸ್ವಲ್ಪ ಡಿಸ್ಟೀಲರಿ ವಾಟರ್ ನ್ನು ಹಾಕಿ ಅದಕ್ಕೆ **Sodium Carbonate Powder** ಹಾಕಿ ಬೆರೆಸಿ, ದ್ರಾವಣವನ್ನು ಸಿದ್ದಪಡಿಸಿ, ಆ ದ್ರಾವಣ ಯಾವುದೇ ಬಣ್ಣಕ್ಕೆ ತಿರುಗದೇ ಇದ್ದು, ಅದನ್ನು ಪಂಚರು ಮತ್ತು ಪಿರ್ಯಾದುದಾರರಿಗೆ ಗಮನಿಸಲು ತಿಳಿಸಿರುತ್ತೇನೆ. ಸದರಿ ದ್ರಾವಣದಿಂದ ಸ್ವಲ್ಪ ದ್ರಾವಣವನ್ನು ತೆಗೆದು ಒಂದು ಗಾಜಿನ ಬಾಟಲಿ ಗೆ ಹಾಕಿ , ಅದನ್ನು

ಕಟ್ಟಿ **A** ಎಂಬ ಅಕ್ಷರದಿಂದ ಸೀಲ್ ಮಾಡಿ , ಒಂದು ಲೇಬಲ್ ನಲ್ಲಿ ನಾವು ಮತ್ತು ಪಂಚರು ಸಹಿ ಮಾಡಿ, **Article**–2 ಎಂದು ಗುರುತಿಸಲಾಯಿತು. ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು ಎಂ.ಒ–9 ಎಂದು ಗುರುತಿಸಲಾಯಿತು. ನಂತರ ಪಂಚ–1 ರವರ ಎರಡು ಕೈ ಬೆರಳುಗಳನ್ನು ಚಾಸಾ.16 ರವರು ತಯಾರಿಸಿ ದ್ರಾವಣದಲ್ಲಿ ತೊಳೆಸಿದಾಗ ಬಣ್ಣರಹಿತವಾದ ದ್ರಾವಣವು ಪಿಂಕ್ ಬಣ್ಣಕ್ಕೆ ತಿರುಗಿರುತ್ತದೆ. ಸದರಿ ದ್ರಾವಣವನ್ನು ಒಂದು ಬಾಟಲಿಗೆ ಹಾಕಿ ಮುಚ್ಚಳ ಮುಚ್ಚಿ, ಅದನ್ನು ಕಟ್ಟಿ **A** ಎಂಬ ಅಕ್ಷರದಿಂದ ಸೀಲ್ ಮಾಡಿ , ಒಂದು ಲೇಬಲ್ ನಲ್ಲಿ ನಾವು ಮತ್ತು ಪಂಚರು ಸಹಿ ಮಾಡಿ, **Article**–3 ಎಂದು ಗುರುತಿಸಲಾಯಿತು. ಅದನ್ನು ಈಗಾಗಲೇ ಎಂಒ–1 ಎಂದು ಗುರುತಿಸಲಾಗಿದ್ದು , ಸಾಕ್ಷಿಯೂ ತನ್ನ ಸಹಿಯನ್ನು ಗುರುತಿಸಿರುತ್ತಾರೆ.

10. ನಂತರ ಆರೋಪಿತರು ಪಿರ್ಯಾದಿಯವರಿಗೆ ಮೊಬೈಲ್ ನಲ್ಲಿ ಲಂಚಕ್ಕಾಗಿ ಒತ್ತಾಯ ಮಾಡಿರುವ ಬಗ್ಗೆ ಪಿರ್ಯಾದಿ ತನ್ನ ಮೊಬೈಲ್ ನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದು, ದೂರು ನೀಡುವ ಕಾಲದಲ್ಲಿ ಒಂದು ಮೆಮೋರಿ ಚಿಪ್ ನ್ನು ಹಾಜರುಪಡಿಸಿದ್ದು, ಸದರಿ ಮೊಮೋರಿ ಚಿಪ್ ನ್ನು ಪಂಚರಿಗೆ ತೋರಿಸಿ, ಅದನ್ನು **Card reader** ನಲ್ಲಿ ಲ್ಯಾಪ್ ಟಾಪ್ ಗೆ ಹಾಕಿ ಕೇಳಿಸಲಾಗಿ , ಸದರಿ ಸಂಭಾಷಣೆಯು ಪಿರ್ಯಾದಿ ಮತ್ತು ಆರೋಪಿತರ ನಡುವೆ ನಡೆದಿದ್ದು, ಅದು ಒಟ್ಟು 6 ನಿಮಿಷ 35 ಸೆಕೆಂಡುಗಳು ಇದ್ದು, ಸದರಿ ಧ್ವನಿ ಮುದ್ರಿಕೆಯನ್ನು ಬರವಣಿಗೆ ರೂಪದಲ್ಲಿ **entrustment** ಮಹಜರ್ ನಲ್ಲಿ ಟೈಪ್ ಮಾಡಿಸಲಾಯಿತು. ನಂತರ ಸದರಿ ಸಂಭಾಷಣೆಯನ್ನು ದಿ.04.09.2018 ರಂದು ಆರೋಪಿತರು ಹಾಗೂ ಪಿರ್ಯಾದಿ

ಮಾತನಾಡಿರುವ ಸಂಬಾಷಣೆ ಆಗಿರುತ್ತದೆ ಎಂದು, ಪಿರ್ಯಾದಿಯವರು ಆರೋಪಿತರು ಮತ್ತು ತನ್ನ ದ್ವನಿಯನ್ನು ಗುರುತಿಸಿರುತ್ತಾರೆ.

11. ನಂತರ ಸಂಭಾಷಣೆಯ ಫೈಲ್ ನ್ನು ನಾನು ಲ್ಯಾಪ್ ಟಾಪ್ ಮುಖಾಂತರ 2 ಸಿಡಿಗಳಿಗೆ ಕಾಪಿ ಮಾಡಿ, ಪ್ರತ್ಯೇಕವಾಗಿ 2 ಸಿಡಿ ಮೇಲರ್ ಗಳಿಗೆ ಹಾಕಿ, ಅದಕ್ಕೆ ಎರಡು ಲೇಬಲ್ ಗಳನ್ನು ಪ್ರತ್ಯೇಕವಾಗಿ ಅಂಟಿಸಿ ಪ್ರಕರಣದ ವಿವರವನ್ನು ನಮೂದಿಸಿ ನಾನು ಮತ್ತು ಸಾಕ್ಷಿದಾರರು ಸಹಿ ಮಾಡಿರುತ್ತೇವೆ. ಸದರಿ ವಸ್ತುಗಳನ್ನು **Article**-4 ಮತ್ತು 4(ಎ) ಎಂದು ನಮೂದಿಸಿ, **A** ಎಂಬ ಅಕ್ಷರದಿಂದ ಸೀಲ್ ಮಾಡಲಾಗಿರುತ್ತದೆ. ಸಾಕ್ಷಿಯು ಸದರಿ **Article** ಗಳನ್ನು ನೋಡಿ ಗುರುತಿಸಿದ್ದು, (ಸದರಿ **Article No**.4 ಮತ್ತು 4(ಎ) ಗಳನ್ನು ನಿಶಾನೆಯಾಗಿ ಗುರುತಿಸಲು ಆರೋಪಿಪರ ವಕೀಲರು ತಕರಾರು ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಸಿಡಿಗಳಿಗೆ ಸಂಬಂಧಪಟ್ಟ ಕಲಂ 65(ಬಿ) ಅಡಿಯ ಪ್ರಮಾಣ ಪತ್ರ ನಿಯಮದ ಪ್ರಕಾರ ಇರುವುದಿಲ್ಲ ಮತ್ತು ಕಾನೂನಿನಡಿ ಊರ್ಜಿತವಾಗುವುದಿಲ್ಲ. ಹಾಗಾಗಿ ತಕರಾರು ಇರುತ್ತದೆ ಎಂದು ನುಡಿಯುತ್ತಾರೆ) ಸದರಿ ತಕರಾರಿಗೆ ಒಳಪಟ್ಟು 2 **Articles** ಗಳನ್ನು ನಿಶಾನೆ ಪಿ-29 ಮತ್ತು 30 ಎಂದು ಗುರುತಿಸಲಾಯಿತು.

12. ನಂತರ ಪಿರ್ಯಾದು ಹಾಜರುಪಡಿಸಿದ ಮೆಮೋರಿ ಚಿಪ್ ಅನ್ನು ಒಂದು ಕವರ್ ನಲ್ಲಿ ಹಾಕಿ ಲೇಬಲ್ ತಯಾರಿಸಿ, ನಾನು ಮತ್ತು ಪಂಚರು ಸಹಿ ಹಾಕಿ, ಅದಕ್ಕೆ **A** ಎಂಬ ಅಕ್ಷರದಿಂದ ಸೀಲ್ ಮಾಡಿ, ಅದನ್ನು **Article**-5 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯೂ ಸದರಿ ವಸ್ತುವನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಎಂಒ-3 ಎಂದು

ಗುರುತಿಸಲಾಗಿರುತ್ತದೆ. ಸಾಕ್ಷಿಯೂ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ **Article No**.1 **to** 5 ಗಳನ್ನು ಠಾಣೆಯಲ್ಲಿ ಸುರಕ್ಷಿತವಾಗಿ ಇರಿಸಲಾಯಿತು. ನಂತರ ನಾನು, ಪಂಚರು, ಪಿರ್ಯಾದುದಾರರು, ಸಿಬ್ಬಂದಿಗಳು ಎಲ್ಲರೂ ಕೈಗಳನ್ನು ಸ್ವಚ್ಛವಾಗಿ ನೀರಿನಿಂದ ತೊಳೆದು ಕೊಂಡಿರುತ್ತೇವೆ.

13. ನಂತರ ಪಿರ್ಯಾದಿಯವರಿಗೆ ಒಂದು ಡಿಜಿಟಲ್ ವಾಯ್ಸ್ ರೆಕಾರ್ಡರ್‌ನ್ನು ನೀಡಿ, ಅದನ್ನು ಉಪಯೋಗಿಸುವ ಬಗ್ಗೆ ಪಿರ್ಯಾದಿಗೆ ತಿಳಿಸಿ, ಆರೋಪಿತರೊಡನೆ ಸಂಭಾಷಣೆಯನ್ನು ನಡೆಸುವಾಗ ಆನ್ ಮಾಡಿಕೊಳ್ಳುವಂತೆ ತಿಳಿಸಿ, ಸಂಭಾಷಣೆಯನ್ನು ರೆಕಾರ್ಡ್ ಮಾಡುವಂತ ಸೂಚಿಸಿ, ಫಿನಾಪ್ತಲಿನ್ ಲೇಪಿತ ಹಣವನ್ನು ಆರೋಪಿತರು ಒತ್ತಾಯಿಸಿದಾಗ ಮಾತ್ರ ನೀಡಬೇಕೆಂದು ಅದುವರೆಗೂ ಮುಟ್ಟಬಾರದು ಎಂದು, ಆರೋಪಿ ಹಣವನ್ನು ಪಡೆದ ನಂತಇರ ಹೊರಗೆ ಬಂದು ತಮ್ಮ ಸೀರೆಯ ಸೆರಗಿನಿಂದ ತಮ್ಮ ಮುಖವನ್ನು ಒರೆಸಿಕೊಳ್ಳುವ ಮೂಲಕ ನಮಗೆ ಸೂಚನೆ ನೀಡಬೇಕೆಂದು ತಿಳಿಸಲಾಯಿತು. ಪಂಚ–2 ರವರನ್ನು ಪಿರ್ಯದಿಯವರೊಂದಿಗೆ ಹೋಗಬೇಕೆಂದು, ಆರೋಪಿ ಮತ್ತು ಪಿರ್ಯಾದುದಾರರ ನಡುವೆ ನಡೆಯುವ ಸಂಭಾಷಣೆಯನ್ನು ಆಲಿಸುವಂತೆ, ಆರೋಪಿ ಲಂಚದ ಹಣವನ್ನು ಎಲ್ಲಿ ಇಟ್ಟುಕೊಳ್ಳುತ್ತಾರೆ ಎಂಬುದರ ಬಗ್ಗೆ ಗಮನಿಸಬೇಕೆಂದು ಸೂಚಿಸಲಾಗಿರುತ್ತದೆ. ನಂತರ ಈ ನಡಾವಳಿಗಳನ್ನು ಠಾಣಾ ಸಿಬ್ಬಂದಿ ಚಾಸಾ.19 ರವರಿಂದ ಪೋಟೋಗಳನ್ನು ತೆಗೆಸಲಾಗಿರುತ್ತದೆ. ಸದರಿ **Entrustment** ಮಹಜರನ್ನು ದಿಃ–05.09.2018 ರಂದು ಮದ್ಯಾಹ್ನ 12.20 ರಿಂದ 2 ಗಂಟೆಯವರೆಗೆ ಚಾ.ಸಾಃ18 ರವರ

ಮೂಲಕ ಲ್ಯಾಪ್ ಟಾಪಿನಲ್ಲಿ ಬೆರಳಚ್ಚು ಮಾಡಲಾಯಿತು. ಸದರಿ ಮಹಜರ್ ಗೆ ನಾನು, ಸಿಬ್ಬಂದಿ, ಪಂಚರು ಮತ್ತು ಪಿರ್ಯಾದಿ ಸಹಿ ಹಾಕಿರುತ್ತೇವೆ. ಸಾಕ್ಷಿಯೂ ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.2(ಡಿ) ಎಂದು ಗುರುತಿಸಲಾಯಿತು. ನಂತರ ಸದರಿ **Article** ಗಳನ್ನು ಠಾಣಾ ಮಾಲು ಪಟ್ಟಿ ಸಂಖ್ಯೆ 16/2018 ರಲ್ಲಿ ಅಳವಡಿಸಿ, ಮಾನ್ಯ ಘನ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಯೂ ಮಾಲು ಪಟ್ಟಿ ಸಂಖ್ಯೆ 16/2018 ನ್ನು ನೋಡಿ ಗುರುತಿಸಿದ್ದು, ಅದನ್ನು (ಪುಟಸಂಖ್ಯೆ-16) ನಿಪಿ.31 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ.31(ಎ) ಎಂದು ಗುರುತಿಸಲಾಯಿತು. ಸಾಕ್ಷಿಯೂ ಮಹಜರ್ ಕಾಲದಲ್ಲಿ ತೆಗೆದ ಪೋಟೊಗಳನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.3 ರಿಂದ 9 ಎಂದು ಗುರುತಿಸಲಾಗಿರುತ್ತದೆ. ಪ್ರತಿ ಪೋಟೋವನ್ನು ಅಂಟಿಸಿದ ಹಾಳೆಯ ಮೇಲೆ ನನ್ನ ಸಹಿ ಇರುತ್ತದೆ.

14. ಅದೇ ದಿನ 2.45 ಗಂಟೆಗೆ ನಾವುಗಳು ಪಂಚರು ಸಿಬ್ಬಂದಿಗಳೊಂದಿಗೆ ಆರೋಪಿತರು ಬರುವುದಾಗಿ ತಿಳಿಸಿದ ಪಿರ್ಯಾದುದಾರರ ಬೆಳವತ್ತಾ ಗ್ರಾಮಕ್ಕೆ ಪಿರ್ಯಾದುದಾರರು ಸೂಚಿಸಿದ ಮಾರ್ಗದಲ್ಲಿ ಅವರ ಮನೆ ಬಳಿ ಸ್ವಲ್ಪ ಹಿಂದೆ ವಾಹನವನ್ನು ನಿಲ್ಲಿಸಿ, ಪಿರ್ಯಾದಿಯವರು ಸೆಕ್ರೆಟರಿ ಮಾದಪ್ಪನವರಿಗೆ ಪೋನ್ ಮಾಡುವಂತೆ ಹೇಳಿ ಪೋನ್ ಮಾಡಿ ಲೌಡ್ ಸ್ಪೀಕರ್ ಆನ್ ಮಾಡಿ ಅವರ ಬಳಿ ಇದ್ದ ಡಿಜಿಟಲ್ ವಾಯಿಸ್ ರೆಕಾರ್ಡ್ ನಲ್ಲಿ ರೆಕಾರ್ಡ್ ಮಾಡಿದರು. ನಂತರ ಪಿರ್ಯಾದುದಾರರು ನನಗೆ ಆರೋಪಿತರು ಹೊರಗಡೆ ಇರುವುದಾಗಿ

ನಾಳೆ ಬೆಳಿಗ್ಗೆ ಆಪೀಸಿಗೆ ಬರುವಂತೆ ತಿಳಿಸಿದರು ಎಂದು ಹೇಳಿದರು. ನಂತರ ಠಾಣೆಗೆ ವಾಪಸ್ಸು ಬಂದು ಸದರಿ ಟಿಜಿಟಲ್ ವಾಯಿಸ್ ರೆಕಾರ್ಡನಲ್ಲಿ ರೆಕಾರ್ಡ್ ಆದ ಸಂಭಾಷಣೆಯನ್ನು ಲ್ಯಾಪ್ ಟ್ಯಾಪಿಗೆ ಹಾಕಿ ಕೇಳಲಾಗಿ ಒಟ್ಟು 1 ನಿಮಿಷ 20 ಸೆಂಕೆಂಡ್ ಸಂಭಾಷಣೆ ಇದ್ದು, ಧ್ವನಿ ರೂಪದಲ್ಲಿದ್ದ ಸಂಭಾಷಣೆಯನ್ನು ಲಿಖಿತ ರೂಪದಲ್ಲಿ ಇರಿಸಲಾಯಿತು. ಮೇಲ್ಕಂಡ ಸಂಭಾಷಣೆಗಳನ್ನು ಲ್ಯಾಪ್ ಟಾಪ್ ಮೂಲಕ 2 ಸಿಡಿಗಳಿಗೆ ಕಾಪಿ ಮಾಡಿಕೊಂಡು 2 ಪ್ರತ್ಯೇಕ ಸಿಡಿ ಮೇಲರ್ ಗಳಿಗೆ ಹಾಕಿ, ಒಂದು ವಿವರವನ್ನು ಬರೆದು ಲೇಬಲ್ ತಯಾರಿಸಿ, ಪಂಚರು ಮತ್ತು ನಾವುಗಳು ಸಹಿ ಹಾಕಿ **Article No**.6 ಮತ್ತು 6(ಎ) ಎಂದು ನಮೂದಿಸಿ **A** ಎಂಬ ಅಕ್ಷರದಿಂದ ಸೀಲ್ ಮಾಡಲಾಯಿತು. (ಸದರಿ **Article No**.6 ಮತ್ತು 6(ಎ) ಗಳನ್ನು ನಿಶಾನೆಯಾಗಿ ಗುರುತಿಸಲು ಆರೋಪಿಪರ ವಕೀಲರು ತಕರಾರು ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಸಿಡಿಗಳಿಗೆ ಸಂಬಂಧಪಟ್ಟ ಕಲಂ 65(ಬಿ) ಅಡಿಯ ಪ್ರಮಾಣ ಪತ್ರ ನಿಯಮದ ಪ್ರಕಾರ ಇರುವುದಿಲ್ಲ ಮತ್ತು ಕಾನೂನಿನಡಿ ಊರ್ಜಿತವಾಗುವುದಿಲ್ಲ. ಹಾಗಾಗಿ ತಕರಾರು ಇರುತ್ತದೆ ಎಂದು ನುಡಿಯುತ್ತಾರೆ) ಸದರಿ ತಕರಾರಿಗೆ ಒಳಪಟ್ಟು ಒಂದು **Article** 6(ಎ) ನ್ನು ನಿಶಾನೆ ಪಿ–32 ಎಂದು ಗುರುತಿಸಲಾಯಿತು.

15. ನಂತರ ಪಿರ್ಯಾದುದಾರರ ಬಳಿ ಇದ್ದ ಲಂಚದ ಹಣವನ್ನು ಠಾಣಾ ಅಲ್ಮೇರಾದಲ್ಲಿ ಪಿರ್ಯಾದುದಾರರ ಮೂಲಕವೇ ಇರಿಸಿ, ಪಂಚ–1 ರವರ ಬಳಿ ಇದ್ದ ನೋಟಿನ ವಿವರದ ಹಾಳೆಯನ್ನು ಕಡತದಲ್ಲಿ ಇರಿಸಲಾಯಿತು. ಸದರಿ ಮಹಜರನ್ನು ಅದೇ ದಿನ 3.50 ರಿಂದ 4.45 ಗಂಟೆಯವರೆಗೆ ಲ್ಯಾಪ್ ಟಾಪಿನಲ್ಲಿ ಚಾ.ಸಾಃ18 ರವರಿಂದ ಟೈಪ್ ಮಾಡಿಸಿ, ನಂತರ

ಸದರಿ ಮಹಜರಿಗೆ ನಾವುಗಳು, ಪಂಚರು, ಪಿರ್ಯಾದುದಾರರು ಸಹಿ ಮಾಡಿರುತ್ತೇವೆ. ಸಾಕ್ಷಿಯು ಸದರಿ ಮಹಜರನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಶಾನೆ ಪಿ–10 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಗಳನ್ನು ನಿಶಾನೆ ಪಿ–10(ಡಿ) ಎಂದು ಗುರುತಿಸಲಾಯಿತು. ನಂತರ ಸಿಡಿಗಳನ್ನು ಠಾಣಾ ಮಾಲುಪಟ್ಟಿ ಸಂಖ್ಯೆ– 17/2018 ರಲ್ಲಿ ನಮೂದಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಯು ಮಾಲುಪಟ್ಟಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ–33 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ–33(ಎ) ಎಂದು ಗುರುತಿಸಲಾಯಿತು. ಪಿರ್ಯಾದಿ ಮತ್ತು ಪಂಚರನ್ನು ಮಾರನೆ ದಿನ ಬೆಳಿಗ್ಗೆ ಬರುವಂತೆ ಸೂಚಿಸಲಾಯಿತು.

16. ದಿಃ– 06.09.2018 ರಂದು ಬೆಳಿಗ್ಗೆ 9.30 ಗಂಟೆಗೆ ಪಂಚರು ಎಸಿಬಿ ಕಚೇರಿಗೆ ಬಂದಿದ್ದು, ನಂತರ 10 ಗಂಟೆ ಸುಮಾರಿಗೆ ಪಿರ್ಯಾದುದಾರರು ಎಸಿಬಿ ಕಚೇರಿಗೆ ಬಂದಿರುತ್ತಾರೆ. ನಂತರ ಠಾಣೆಯ ಅಲ್ಮೇರಾದಲ್ಲಿ ಇಟ್ಟಿದ್ದ ಪಿನಾಪ್ತಲೀನ್ ಲೇಪಿತ ಲಂಚದ ಹಣವನ್ನು ಪಂಚ–1 ರವರಿಗೆ ತಾಳೆ ಮಾಡಲು ತಿಳಿಸಿ, ಅದನ್ನು ಪಿರ್ಯಾದಿಯವರ ಚಿಕ್ಕ ಪರ್ಸ್ ಗೆ ಇರಿಸಲಾಯಿತು. ನಂತರ ಚೀಟಿಯ ಹಾಳೆಯನ್ನು ಪಂಚ–1 ರವರಿಗೆ ನೀಡಲಾಯಿತು. ನಂತರ ಎಲ್ಲರು ನೀರಿನಿಂದ ಕೈತೊಳೆದುಕೊಂಡಿರುತ್ತೇವೆ. ಪಿರ್ಯಾದುದಾರರಿಗೆ ಡಿಜಿಟಲ್ ವಾಯಿಸ್ ರೆಕಾರ್ಡನ್ನು ನೀಡಿ ಟ್ರ್ಯಾಪ್ ಕಾಲದಲ್ಲಿ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಪಿರ್ಯಾದುದಾರರಿಗೆ ಮತ್ತು ಪಂಚ–2 ರವರಿಗೆ ತಿಳಿಸಲಾಯಿತು.

17. ನಂತರ ಐಒ ಕಿಟ್ಟನ್ನು ತೆಗೆದುಕೊಂಡು ಬೆಳಿಗ್ಗೆ 10.20 ಗಂಟೆಗೆ ಆರೋಪಿತರು ಬರಲು ತಿಳಿಸಿದ ಸಿದ್ದಲಿಂಗಪುರ ಗ್ರಾಮಕ್ಕೆ ಆರೋಪಿತ ಕರ್ತವ್ಯ ನಿರ್ವಹಿಸುವ ಗ್ರಾಮ ಪಂಚಾಯಿತಿ ಕಚೇರಿ ಬಳಿ ಸ್ವಲ್ಪ ಹಿಂದಕ್ಕೆ ವಾಹನಗಳನ್ನು ನಿಲ್ಲಿಸಿ ಪಿರ್ಯಾದಿ ಮತ್ತು ಪಂಚ-2 ರವರನ್ನು ಆರೋಪಿಯ ಬೇಟಿಗೆ ಕಳುಹಿಸಿ, ಪಂಚ-1 ಮತ್ತು ನಾವುಗಳು ಅಲ್ಲಲ್ಲಿ ಮರೆಯಾಗಿ ನಿಂತುಕೊಂಡೆವು. ಪಿರ್ಯಾದಿ ಮತ್ತು ಪಂಚ-2 ರವರು ಗ್ರಾಮ ಪಂಚಾಯಿತಿ ಕಚೇರಿಯ ಒಳಗಡೆ ಹೋಗಿ ಸುಮಾರು 10.55 ಗಂಟೆಗೆ ಪಿರ್ಯಾದುದಾರರು ಹೊರಗಡೆ ಬಂದು ಸೀರೆಯ ಸೆರಗಿನಿಂದ ಮುಖವನ್ನು ಒರೆಸಿಕೊಳ್ಳುವ ಮೂಲಕ ಸೂಚನೆಯನ್ನು ನೀಡಿದರು.

18. ನಾವುಗಳೆಲ್ಲರೂ ಕಚೇರಿಗೆ ಹೋಗಿ ಪಿರ್ಯಾದಿಯವರನ್ನು ಕೇಳಲಾಗಿ ಸ್ಕ್ರೆಟರಿ ಮಾದಪ್ಪರವರು ಹಣವನ್ನು ಪಡೆದುಕೊಂಡು ಪ್ಯಾಂಟಿನ ಎಡಜೇಬಿಗೆ ಹಾಕಿಕೊಂಡು ಯಾರಿಗೂ ಹೇಳಬೇಡಿ ಎಂದು ಹೇಳಿರುತ್ತಾರೆ ಎಂದು ತಿಳಿಸಿದರು. ನಂತರ ಪಿರ್ಯಾದಿ ನಮ್ಮನ್ನು ಕರೆದುಕೊಂಡು ಕಟ್ಟಡದ ಒಂದು ರೂಮಿನಲ್ಲಿ ಕಂಪ್ಯೂಟರ್ ಕೆಲಸ ಮಾಡುತ್ತಿದ್ದ ಒಬ್ಬರನ್ನು ತೋರಿಸಿ, ಇವರೇ ಸ್ಕ್ರೆಟರಿ ಮಾದಪ್ಪ ಎಂದು ಕೈ ತೋರಿಸಿದರು. ಆಗ ನಾವು ನಮ್ಮ ಪರಿಚಯವನ್ನು ಸದರಿ ಆರೋಪಿತರಿಗೆ ತಿಳಿಸಿರುತ್ತೇವೆ. ಠಾಣಾ ಸಿಬ್ಬಂದಿ ಚೇತನ್ ಆರೋಪಿತರ ಬಲಗೈಯನ್ನು, ಠಾಣಾ ಸಿಬ್ಬಂದಿ ಕುಮಾರ್ ಆರಾಧ್ಯ ಆರೋಪಿತರ ಎಡಗೈಯನ್ನು ಹಿಡಿದುಕೊಂಡರು. ನಂತರ ಕಚೇರಿಯಲ್ಲಿ ಹಾಜರಿದ್ದ ಆರೋಪಿತರ ಮೇಲಾಧಿಕಾರಿ ಪಿಡಿಒರವರನ್ನು ಕರೆಯಿಸಿ ಅವರುಗಳಿಗೆ ಪ್ರಕರಣದ ವಿಚಾರವನ್ನು ತಿಳಿಸಿ ಅವರು ತಮ್ಮ

ಪರಿಚಯವನ್ನು ತಿಳಿಸಿ ಎನ್. ಬೋರೇಗೌಡ ಎಂದು ತಿಳಿಸಿದರು. ಅವರಿಗೆ ಮುಂದಿನ ನಡಾವಳಿಯ ಕಾಲದಲ್ಲಿ ಹಾಜರಿರುವಂತೆ ಸೂಚಿಸಲಾಯಿತು.

19. ಪಿರ್ಯಾದುದಾರರು ತಮ್ಮ ದೂರಿನಲ್ಲಿ ಆರೋಪಿತನ ಹೆಸರು ಮಾರಪ್ಪ ಎಂದು ತಿಳಿಸಿದ್ದು, ಅಲ್ಲಿ ಅವರ ಹೆಸರು ಮರಪ್ಪ ಎಂದು ತಿಳಿದು ಬಂದಿದುದ್ದರಿಂದ, ಆರೋಪಿಯ ಹೆಸರನ್ನು ಮರಪ್ಪ ಎಂದು ನಡಾವಳಿಯಲ್ಲಿ ಪರಿಗಣಿಸಲಾಯಿತು. ನಡೆದ ಘಟನೆಯ ಬಗ್ಗೆ ಪಂಚ–2 ಮತ್ತು ಪಿರ್ಯಾದುದಾರರನ್ನು ವಿಚಾರಿಸಲಾಗಿ ಮೊದಲಿಗೆ ಪಿರ್ಯಾದುದಾರರವರು ನಾನು ಮತ್ತು ಪಂಚ ಸಾಕ್ಷಿ–2 ರವರು ಇದೇ ರೂಮಿನಲ್ಲಿ ಮರಪ್ಪರವರು ಕುಳಿತಿದ್ದು, ಪಂಚ–2 ರವರು ಹೋರಾಂಡದಲ್ಲಿ ನಿಂತುಕೊಂಡರು. ಅವರನ್ನು ನೋಡಿ ಆರೋಪಿತರು ಪಿರ್ಯಾದುದಾರರಿಗೆ ಆ ರೂಮಿಗೆ ನಡೆಯಿರಿ ಎಂದು ಎದುರುಗಡೆ ಇದ್ದ ರೂಮಿಗೆ ಹೋಗಿ ಸ್ವಲ್ಪ ಸಮಯ ಕುಳಿತುಕೊಂಡಿದ್ದು, ಮತ್ತೆ ವಾಪಸ್ಸು ಅದೇ ರೂಮಿಗೆ ಬಂದು, ಆಗ ಪಿರ್ಯಾದುದಾರರು 'ನಮಸ್ತೆ ಸರ್ ನಮ್ಮ ಪೈಲ್ ಎಲ್ಲಾ ರೆಡಿ ಇದೆಯಾ ಎಂದು ಕೇಳಿದರು, ಅದಕ್ಕೆ ಮರಪ್ಪ 'ಬೆಲವತ್ತಾ ಅಲ್ವ' ಎಂದು ಹೇಳಿ 'ನಿಮಗೆ ಒಂದು ವಾರ ಬೇಕಾಗುತ್ತದೆ ಖಾತೆ ಸಿಗಬೇಕಾದರೆ' ಎಂದರು. ನಂತರ ತಾನು ತನ್ನ ಕೆಲಸದ ಬಗ್ಗೆ ಕೇಳಿದಾಗ ಅವರು 'ಅರ್ಜಿ ಕೊಟ್ಟು ಕೂತುಕೊಂಡರೆ ಆದದ' ಎಂದು ಹೇಳಿ ಕೈಯಿಂದ ಸನ್ನೆ ಮಾಡಿ ಲಂಚದ ಹಣಕ್ಕೆ ಒತ್ತಾಯಿಸಿದಾಗ, ತಾನು ತನ್ನ ಬಳಿ ಇದ್ದ ಲಂಚದ ಹಣವನು ಅವರಿಗೆ ಕೊಟ್ಟರು ಎಂದು, ಆಗ ಆರೋಪಿತರು ಹಣವನ್ನು ಎರಡು ಕೈಗಳಿಂದ ಎಣಿಸಿ, 'ಹತ್ತಿದೆ' ಎಂದು ಹೇಳಿ ಪುನಃ ಎಣಿಸಿಕೊಂಡು 'ಹನ್ನೆರೆಡು' ಇದೆ ಎಂದು ಹೇಳಿ ಅವರು ಧರಿಸಿದ್ದ ಪ್ಯಾಂಟಿನ ಎಡಭಾಗದ

ಜೇಬಿಗೆ ಹಾಕಿಕೊಂಡರು ಎಂದು, ನಂತರ ಅವರಿಗೆ 'ನೆಕ್ಸಟ್ ಶುಕ್ರವಾರ, ಶನಿವಾರದಲ್ಲಿ ಸಿಗುತ್ತೆ' ಎಂದು ಹೇಳಿ, ನಂತರ 'ಜನಗಳ ಜೊತೆ ಅಷ್ಟು ಕೊಟ್ರೆ, ಇಷ್ಟು ಕೊಟ್ರೆ ಎಂದು ಹೇಳಕೋಗಬೇಡಿ, ಇನ್ನೊಬ್ಬರಿಗೆ ಯಾರಿಗೂ ಹೇಳಬಾರದು, ಏನೋ ಅಷ್ಟೋ-ಇಷ್ಟೋ ಕೊಟ್ಟಿದ್ದೀವಿ, ಮಾಡಿಸಿಕೊಟ್ರು ಎಂದು ಹೇಳಿದರು ಎಂದು ನಮಗೆ ತಿಳಿಸಿ, ನಂತರ ಪಿರ್ಯಾದಿಯು ತಾನು ಬರುತ್ತೇನೆಂದು ಹೇಳಿ ವಾಪಸ್ಸು ಬಂದೆ ಎಂದು ತಿಳಿಸಿ, ಈ ಎಲ್ಲಾಸಂಭಾಷಣೆಯನ್ನು ವಾಯಿಸ್ ರೆಕಾರ್ಡರ್ ನಲ್ಲಿ ರೆಕಾರ್ಡ್ ಮಾಡಿರುವುದಾಗಿ ವಾಯಿಸ್ ರೆಕಾರ್ಡರನ್ನು ವಾಪಸ್ಸು ನನಗೆ ನೀಡಿದರು.

20. ನಂತರ ಪಂಚ-2 ರವವರನು ವಿಚಾರಣೆ ಮಾಡಲಾಗಿ, ತಾನು ಇದೇ ರೂಮಿನ ಬಾಗಿಲ ಬಳಿ ನಿಂತು ಎಲ್ಲವನ್ನು ನೋಡುತ್ತಿದ್ದು, ಮರಪ್ಪರರು ಪಿರ್ಯಾದುದಾರರ ಬಳಿ ಲಂಚದ ಹಣಕ್ಕೆ ಕೈಯಿಂದ ಸನ್ನೆ ಮಾಡಿ ಲಂಚದ ಹಣ ಪಡೆದು, ಎರಡೂ ಕೈಗಳಿಂದ ಎಣಿಸಿ, ಅವರು ಧರಿಸಿದ್ದ ಪ್ಯಾಂಟಿನ ಎಡಭಾಗದ ಜೇಬಿಗೆ ಹಾಕಿಕೊಂಡರು ಎಂದು ನನಗೆ ತಿಳಿಸಿದರು.

21. ನಂತರ ಠಾಣಾ ಸಿಬ್ಬಂದಿ ಗುರುಪ್ರಸಾದ್ ರವರಿಂದ 3 ಪ್ಲಾಸ್ಟಿಕ್ ಗ್ಲಾಸ್ ಗಳನ್ನು, 4 ಗಾಜಿನ ಬಾಟಲ್ ಗಳನ್ನು ಕಿಟ್ಟಿನಿಂದ ತೆಗೆದು, ನೀರಿನಿಂದ ಶುದ್ದಿಕರಿಸಿ , 3 ಪ್ಲಾಸ್ಟಿಕ್ ಗ್ಲಾಸ್ ಗಳಲ್ಲಿ ಡಿಸ್ಟೀಲ್ಡ್ ವಾಟರ್ ನ್ನು ಹಾಕಿ, ಅದರಲ್ಲಿ **sodium carbonate** ಪುಡಿಯನ್ನು ಹಾಕಿ, ದ್ರಾವಣವನ್ನು ಪ್ರತ್ಯೇಕವಾಗಿ ತಯಾರಿಸಿ, ಬಣ್ಣರಹಿತವಾಗಿದ್ದ 3 ಲೋಟಗಳಲ್ಲಿದ್ದ ದ್ರಾವಣಗಳಲ್ಲಿ ಮಾದರಿಗಾಗಿ ಸ್ವಲ್ಪ ದ್ರಾವಣವನ್ನು ಒಂದು ಗಾಜಿನ ಬಾಟಲಿಗೆ ಹಾಕಿ, ಮುಚ್ಚಳ ಹಾಕಿ, ಬಟ್ಟೆಯಲ್ಲಿ ಸುತ್ತಿ, ಅದನ್ನು **A** ಎಂಬ ಅಕ್ಷರದಿಂದ ಸೀಲ್ ಮಾಡಿ ಅದಕ್ಕೆ **Article**-7

ಎಂದು ಗುರುತಿಸಲಾಗಿರುತ್ತದೆ. ಸದರಿ ಬಾಟಲಿನ ಮೇಲೆ, ಪ್ರಕರಣದ ವಿವರ, ದ್ರಾವಣದ ವಿವರ, ಒಂದು ಲೇಬಲ್ ತಯಾರಿಸಿ, ಪಂಚರು ಮತ್ತು ನಾವು ಸಹಿ ಹಾಕಿರುತ್ತೇವೆ. ಸದರಿ ವಸ್ತುವನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು **Article** 7 ನ್ನು ನೋಡಿ ಗುರುತಿಸಿದ್ದು , ಅದನ್ನು ಎಂ.ಒ–10 ಎಂದು ಗುರುತಿಸಲಾಯಿತು.

22. ಬಳಿಕ ಪ್ಲಾಸ್ಟಿಕ್ ಲೋಟದಲ್ಲಿ ಇದ್ದ ಬಣ್ಣ ರಹಿತ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಆರೋಪಿತರ ಬಲಗೈ ಬೆರಳುಗಳನ್ನು ದ್ರಾವಣದಲ್ಲಿ ಅದ್ದಿಸಿ, ತೊಳೆಸಲಾಗಿ, ದ್ರಾವಣವು ತೆಳು ಗುಲಾಬಿ ಬಣ್ಣಕ್ಕೆ ಬದಲಾಗಿರುತ್ತದೆ. ದ್ರಾವಣವನ್ನು ಒಂದು ಗಾಜಿನ ಬಾಟಲಿಗೆ ಹಾಕಿ, ಮುಚ್ಚಳ ಹಾಕಿ, ಬಟ್ಟೆಯಲ್ಲಿ ಸುತ್ತಿ, ಅದನ್ನು **A** ಎಂಬ ಅಕ್ಷರದಿಂದ ಸೀಲ್ ಮಾಡಿ ಅದಕ್ಕೆ **Article**–8 ಎಂದು ಗುರುತಿಸಲಾಗಿರುತ್ತದೆ. ಸದರಿ ಬಾಟಲಿನ ಮೇಲೆ, ಪ್ರಕರಣದ ವಿವರ , ದ್ರಾವಣದ ವಿವರ, ಒಂದು ಲೇಬಲ್ ತಯಾರಿಸಿ , ಪಂಚರು ಮತ್ತು ನಾವು ಸಹಿ ಹಾಕಿರುತ್ತೇವೆ. ಸದರಿ ವಸ್ತುವನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯೂ ಈಗ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಎಂಒ–4 ಎಂದು ಗುರುತಿಸಲಾಗಿರುತ್ತದೆ.

23. ನಂತರ ಆರೋಪಿತರ ಎಡಗೈ ಬೆರಳುಗಳನ್ನು ಮತ್ತೊಂದು ಸೋಡಿಯಂ ದ್ರಾವಣ ಇರುವ ಪ್ಲಾಸ್ಟಿಕ್ ಗ್ಲಾಸಿನಲ್ಲಿ ಅದ್ದಿಸಿ, ತೊಳೆಸಲಾಗಿ, ದ್ರಾವಣವು ತೆಳು ಗುಲಾಬಿ ಬಣ್ಣಕ್ಕೆ ಬದಲಾಗಿರುತ್ತದೆ. ದ್ರಾವಣವನ್ನು ಒಂದು ಗಾಜಿನ ಬಾಟಲಿಗೆ ಹಾಕಿ, ಅದನ್ನು **A** ಎಂಬ ಅಕ್ಷರದಿಂದ ಸೀಲ್ ಮಾಡಿ ಅದಕ್ಕೆ **Article**–9 ಎಂದು ಗುರುತಿಸಲಾಗಿರುತ್ತದೆ. ಸದರಿ ಬಾಟಲಿನ ಮೇಲೆ, ಪ್ರಕರಣದ ವಿವರ, ದ್ರಾವಣದ ವಿವರ, ಒಂದು ಲೇಬಲ್ ತಯಾರಿಸಿ,

ಪಂಚರು ಮತ್ತು ನಾವು ಸಹಿ ಹಾಕಿರುತ್ತೇವೆ. ಸದರಿ ವಸ್ತುವನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯೂ ಈಗ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಎಂಬ–5 ಎಂದು ಗುರುತಿಸಲಾಗಿರುತ್ತದೆ.

24. ನಂತರ ಆರೋಪಿತರಿಗೆ ಲಂಚದ ಹಣವನ್ನು ಹಾಜರುಪಡಿಸುವಂತೆ ಸೂಚಿಸಿದಾಗ, ಅವರು ತಾವು ಧರಿಸಿದ್ದ ಪ್ಯಾಂಟಿನ ಎಡ ಜೇಬಿನಿಂದ ಲಂಚದ ಹಣವನ್ನು ತೆಗೆದು ಹಾಜರುಪಡಿಸಿದ್ದು, ಅದನ್ನು ಪಂಚ–1 ರವರಿಗೆ ಕೊಡಿಸಿ, ಪಂಚ–1 ರವರಿಗೆ ಅವರ ಬಳಿ ಇದ್ದ ನೋಟಿನ ವಿವರ ಇದ್ದ ಹಾಳೆಯನ್ನು ಪಂಚ–2 ರವರಿಗೆ ಕೊಡಿಸಿ, ಅವರು ನೋಟಿನ ವಿವರಗಳನ್ನು ಮತ್ತು ನೋಟುಗಳನ್ನು ತಾಳೆ ಮಾಡಿ ನೋಡಿರುತ್ತಾರೆ. ಅವುಗಳು ತಾಳೆಯಾಗಿರುತ್ತವೆ. ಸದರಿ ವಿವರಗಳನ್ನು ಪಂಚನಾಮೆಯಲ್ಲಿ ನಮೂದಿಸಲಾಗಿರುತ್ತದೆ. ಮೇಲ್ಕಂಡ ನೋಟುಗಳನ್ನು ಒಂದು ಕವರ್ ನಲ್ಲಿ ಹಾಕಿ, **A** ಎಂಬ ಅಕ್ಷರದಿಂದ ಸೀಲ್ ಮಾಡಿ, ಅದಕ್ಕೆ **Article**–10 ಎಂದು ಗುರುತಿಸಲಾಗಿರುತ್ತದೆ. ಒಂದು ಲೇಬಲ್ ತಯಾರಿಸಿ, ಪಂಚರು ಮತ್ತು ನಾವು ಸಹಿ ಹಾಕಿರುತ್ತೇವೆ. ಸದರಿ ನೋಟುಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ನೋಟುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮುದ್ದೆಮಾಲುಃ–8 ಎಂದು ಗುರುತಿಸಲಾಗಿರುತ್ತದೆ. ನೋಟಿನ ವಿವರಗಳಿದ್ದ ಹಾಳೆಗಳನ್ನು ಕಡತಕ್ಕೆ ಅಳವಡಿಸಿಕೊಳ್ಳಲಾಯಿತು.

25. ಲಂಚದ ಹಣವನ್ನು ಆರೋಪಿತ ತನ್ನ ಪ್ಯಾಂಟ್ ಜೇಬಿನ ಎಡಬಾಗದಲ್ಲಿ ಇಟ್ಟುಕೊಂಡಿದ್ದರಿಂದ, ಸದರಿ ಪ್ಯಾಂಟನ್ನು ದ್ರಾವಣದಲ್ಲಿ ಅದ್ದಿಸಿ ತೊಳೆಸಬೇಕಾದ್ದರಿಂದ, ಒಂದು

ಬದಲಿ ಪ್ಯಾಂಟನ್ನು ಪಿಡಿಬರವರಿಂದ ವ್ಯವಸ್ಥೆ ಮಾಡಿಸಿ, ಒಂದು ಪ್ಲಾಸ್ಟಿಕ್ ಲೋಟದಲ್ಲಿ **Sodium carbonate** ದ್ರಾವಣ ತಯಾರಿಸಿದ್ದ ದ್ರಾವಣದಲ್ಲಿ ಎಡಭಾಗದ ಜೇಬಿನ ಒಳಬದಿಯನ್ನು ಅದ್ದಿಸಿ ತೊಳೆದಾಗ ಸದರಿ ದ್ರಾವಣವು ತೆಳು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಸದರಿ ದ್ರಾವಣವನ್ನು ಒಂದು ಗಾಜಿನ ಬಾಟಲಿಗೆ ಹಾಕಿ, ಅದನ್ನು **A** ಎಂಬ ಅಕ್ಷರದಿಂದ ಸೀಲ್ ಮಾಡಿ ಅದಕ್ಕೆ **Article**-11 ಎಂದು ಗುರುತಿಸಲಾಗಿರುತ್ತದೆ. ಸದರಿ ಬಾಟಲಿನ ಮೇಲೆ, ಪ್ರಕರಣದ ವಿವರ , ದ್ರಾವಣದ ವಿವರ, ಒಂದು ಲೇಬಲ್ ತಯಾರಿಸಿ , ಪಂಚರು ಮತ್ತು ನಾವು ಸಹಿ ಹಾಕಿರುತ್ತೇವೆ. ಸದರಿ **Article** ನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯೂ ಈಗ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಎಂಓ-**6** ಎಂದು ಗುರುತಿಸಲಾಗಿರುತ್ತದೆ.

26. ನಂತರ ಆರೋಪಿತರು ಧರಿಸಿದ್ದ ಪ್ಯಾಂಟ್ ನ್ನು ಅಮಾನತ್ತುಪಡಿಸಿಕೊಂಡು ಒಂದು ಕವರಿನಲ್ಲಿ ಹಾಕಿ , ಅದನ್ನು **A** ಎಂಬ ಅಕ್ಷರದಿಂದ ಸೀಲ್ ಮಾಡಿ ಅದಕ್ಕೆ **Article**-12 ಎಂದು ಗುರುತಿಸಲಾಗಿರುತ್ತದೆ. ಸದರಿ ಕವರ್ ಮೇಲೆ, ಪ್ರಕರಣದ ವಿವರ, ಒಂದು ಲೇಬಲ್ ತಯಾರಿಸಿ, ಪಂಚರು ಮತ್ತು ನಾವು ಸಹಿ ಹಾಕಿರುತ್ತೇವೆ. ಸದರಿ ಪ್ಯಾಂಟನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯೂ ಈಗ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಎಂಓ-**7** ಎಂದು ಗುರುತಿಸಲಾಗಿರುತ್ತದೆ.

27. ನಂತರ ಮೇಲ್ಕಂಡಂತೆ ದ್ರಾವಣ ತಯಾರಿಸಲು ಉಪಯೋಗಿಸಿದ **sodium carbonate** ಪೌಡರನ್ನು ಮಾದರಿಗಾಗಿ ಸ್ವಲ್ಪ ತೆಗೆದು ಒಂದು ಪೊಟ್ಟಣ ಕಟ್ಟಿ, ಒಂದು ಕವರ್ ಒಳಗಡೆ ಹಾಕಿ, ಅದನ್ನು **A** ಎಂಬ ಅಕ್ಷರದಿಂದ ಸೀಲ್ ಮಾಡಿ ಅದಕ್ಕೆ **Article**-13

ಎಂದು ಗುರುತಿಸಲಾಗಿರುತ್ತದೆ. ಸದರಿ ಕವರ್ ಮೇಲೆ, ಪ್ರಕರಣದ ವಿವರ, ಒಂದು ಲೇಬಲ್ ತಯಾರಿಸಿ , ಪಂಚರು ಮತ್ತು ನಾವು ಸಹಿ ಹಾಕಿರುತ್ತೇವೆ. ಸದರಿ ವಸ್ತುವನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯೂ ಈಗ ನೋಡಿ ಗುರುತಿಸಿದ್ದು, ಅದನ್ನು ಎಂಒ– 11 ಎಂದು ಗುರುತಿಸಲಾಯಿತು.

28. ನಂತರ ಲಂಚದ ಹಣವನ್ನು ಪಡೆದುಕೊಳ್ಳುವ ಸಮಯದಲ್ಲಿ ಪಿರ್ಯಾದುದಾರರು ಡಿಜಿಟಲ್ ವಾಯ್ಸ್ ರೆಕಾರ್ಡ್ ನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದನು, ವಾಯ್ಸ್ ರೆಕಾರ್ಡ್ ನ್ನು ಒಂದು ಲ್ಯಾಪ್ ಟಾಪ್ ಗೆ ಹಾಕಿ ಕೇಳಲಾಗಿ, ಅದರಲ್ಲಿ ಒಟ್ಟು 13 ನಿಮಿಷಗಳ ಸಂಭಾಷಣೆ ಇದ್ದು, ಧ್ವನಿ ರೂಪದಲ್ಲಿ ಇದುದ್ದನ್ನು ಲಿಖಿತ ರೂಪದಲ್ಲಿ, ಟ್ರ್ಯಾಪ್ ಮಹಜರ್ ನಲ್ಲಿ ನಮೂದಿಸಲಾಗಿರುತ್ತದೆ. ಮೊದಲಿಗೆ ಅದರಲ್ಲಿ ನಡೆದಾಡುವ ಶಬ್ದ ಅನಂತರ 2 ನಿಮಿಷ 54 ಸೆಕೆಂಡಿನ ನಂತರ ಇದ್ದ ಸಂಬಾಷಣೆಯನ್ನು ಲಿಖಿತ ರೂಪದಲ್ಲಿ ಟೈಪ್ ಮಾಡಿಸಿ, ಮೇಲ್ಕಂಡ ಸಂಭಾಷಣೆಯ ಪೈಕಿ ಪಿರ್ಯಾದುದಾರರು ಸಂಭಾಷಣೆಯಲ್ಲಿ ತನ್ನ ಧ್ವನಿಯನ್ನು ಗುರುತಿಸಿದ್ದು, ಸಂಭಾಷಣೆಯಲ್ಲಿ ಆರೋಪಿತರ ಧ್ವನಿಯನ್ನು, ಹಾಜರಿದ್ದ ಚಾಸಾ.4 ರವರು ಗುರುತಿಸಿರುತ್ತಾರೆ. ಸದರಿ ಸಂಭಾಷಣೆಯನ್ನು ಲ್ಯಾಪ್ ಟಾಪ್ ಮೂಲಕ 3 ಸಿಡಿಗಳಿಗೆ ಕಾಪಿ ಮಾಡಿ, ಒಂದು ಸಿಡಿಯನ್ನು ಆರೋಪಿತರಿಗೆ ನೀಡಿ, ಉಳಿದ 2 ಸಿಡಿಗಳನ್ನು ಅಮಾನತ್ತುಪಡಿಸಿಕೊಳ್ಳುವ ಸಂಬಂಧ 2 ಸಿಡಿ ಮೇಲರ್ ಗಳಿಗೆ ಪ್ರತ್ಯೇಕವಾಗಿ ಹಾಕಿ, ಅವುಗಳ ಮೇಲೆ ಲೇಬಲ್ ಅಂಟಿಸಿ, ಪ್ರಕರಣದ ವಿವರ ಮತ್ತು ಸಂಭಾಷಣೆಯ ವಿವರವನ್ನು ನಮೂದಿಸಿ, ಅದಕ್ಕೆ ನಾನು ಮತ್ತು ಪಂಚರು ಸಹಿ ಮಾಡಿರುತ್ತೇವೆ. ಸದರಿ ಕವರ್ ನ್ನು **A** ಎಂಬ ಅಕ್ಷರದಿಂದ

ಸೀಲ್ ಮಾಡಿ ಅದಕ್ಕೆ **Article**-14 ಮತ್ತು 14(ಎ) ಎಂದು ಗುರುತಿಸಲಾಯಿತು. (ಸದರಿ **Article No**.14 ಮತ್ತು 14(ಎ) ಗಳನ್ನು ನಿಶಾನೆಯಾಗಿ ಗುರುತಿಸಲು ಆರೋಪಿ ಪರ ವಕೀಲರು ತಕರಾರು ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಸಿಡಿಗಳಿಗೆ ಸಂಬಂಧಪಟ್ಟ ಕಲಂ 65(ಬಿ) ಅಡಿಯ ಪ್ರಮಾಣ ಪತ್ರ ನಿಯಮದ ಪ್ರಕಾರ ಇರುವುದಿಲ್ಲ ಮತ್ತು ಕಾನೂನಿನಡಿ ಊರ್ಜಿತವಾಗುವುದಿಲ್ಲ. ಹಾಗಾಗಿ ತಕರಾರು ಇರುತ್ತದೆ ಎಂದು ನುಡಿಯುತ್ತಾರೆ) ಸದರಿ ತಕರಾರಿಗೆ ಒಳಪಟ್ಟು ಒಂದು **Article** 14(ಎ) ನ್ನು ನಿಶಾನೆ ಪಿ-34 ಎಂದು ಗುರುತಿಸಲಾಯಿತು.

29. ನಂತರ ಈಗಾಗಲೇ **entrustment** ಮಹಜರ್ ಕಾಲದಲ್ಲಿ ಅಮಾನತ್ತುಪಡಿಸಿಕೊಂಡ **Article**-4, 6 ಮತ್ತು 14 ರಲ್ಲಿರುವ ಸಂಭಾಷಣೆಯಲ್ಲಿ ಪಿರ್ಯಾದುದಾರರು ಮತ್ತು ಆರೋಪಿತರು ಮಾತನಾಡಿರುವುದನ್ನು ಖಾತರಿಪಡಿಸಿಕೊಳ್ಳುವ ಸಂಬಂದ ಮಾದರಿ ಧ್ವನಿಯನ್ನು ಪಡೆದುಕೊಂಡು, ಎಫ್ ಎಸ್ ಎಲ್ ಗೆ ಕಳುಹಿಸಬೇಕಾದ್ದರಿಂದ, ಪಿರ್ಯಾದುದಾರರು ಮತ್ತು ಆರೋಪಿತರ ಮಾದರಿ ಧ್ವನಿಗಳನ್ನು ಪಡೆದುಕೊಳ್ಳಲು ಅವರು ಒಪ್ಪಿಗೆಯನ್ನು ನೀಡಿದ್ದು, ಆ ಪ್ರಕಾರ **Article**-4, 6 ಮತ್ತು 14 ರಲ್ಲಿರುವ ಸಂಭಾಷಣೆಯ ಪೈಕಿ, ಪಿರ್ಯಾದುದಾರರು ಮಾತನಾಡಿರುವ ಸಂಬಾಷಣೆಯನ್ನು ಒಂದು ಹಾಳೆಯಲ್ಲಿ ಲಿಖಿತ ರೂಪಕ್ಕೆ ಇಳಿಸಿ , ಅದನ್ನು ಪಿರ್ಯದುದಾರರಿಗೆ ನೀಡಿ, 3 ಬಾರಿ ಪ್ರತ್ಯೇಕವಾಗಿ ಓದಿಸಿ, ವಾಯ್ಸ್ ರೆಕಾರ್ಡ್‌ಮಾಡಿರುತ್ತೇವೆ. ಸದರಿ ಸಂಭಾಷಣೆಯನ್ನು ಲಿಖಿತ ರೂಪದಲ್ಲಿ ಮಹಜರ್ ನಲ್ಲಿ ನಮೂದಿಸಲಾಗಿರುತ್ತದೆ. ನಂತರ ಅದೇ ರೀತಿ **Article**-4 ರಲ್ಲಿ

ಆರೋಪಿತರು ಮಾತನಾಡಿರುವ ಸಂಭಾಷಣೆಯನ್ನು ಲಿಖಿತ ರೂಪದಲ್ಲಿ ಬರೆಸಿಕೊಂಡು 3 ಬಾರಿ ಪ್ರತ್ಯೇಕವಾಗಿ ಓದಿಸಿ, ವಾಯ್ಸ್ ರೆಕಾರ್ಡ ಮಾಡಿರುತ್ತೇವೆ. ನಂತರ ಸದರಿ ಪಿರ್ಯಾದುದಾರರು ಮಾದರಿ ಧ್ವನಿಗಾಗಿ ಡಿಜಿಟಲ್ ವಾಯ್ಸ್ ರೆಕಾರ್ಡ್ ನಲ್ಲಿ ರೆಕಾರ್ಡ್ ಮಾಡಿದ ಸಂಭಾಷಣೆಯನ್ನು ಲ್ಯಾಪ್ ಟಾಪ್ ಗೆ ಹಾಕಿ , ಸಿಡಿಯಲ್ಲಿ ಕಾಪಿ ಮಾಡಿ , ಸದರಿ ಸಿಡಿಯ ಮೇಲರ್ ನಲ್ಲಿ ಹಾಕಿ , ಒಂದು ಕವರ್ ಗೆ ಹಾಕಿ , ಒಂದು ಲೇಬಲ್ ಅಂಟಿಸಿ, ಅದಕ್ಕೆ ನಾನು ಮತ್ತು ಪಂಚರು ಸಹಿ ಮಾಡಿರುತ್ತೇವೆ. ಸದರಿ ಕವರನ್ನು **A** ಎಂಬ ಅಕ್ಷರದಿಂದ ಸೀಲ್ ಮಾಡಿ ಅದಕ್ಕೆ **Article**-15 ಎಂದು ಗುರುತಿಸಲಾಗಿರುತ್ತದೆ.

30. ನಂತರ ಸದರಿ ಆರೋಪಿತರು ಮಾದರಿ ಧ್ವನಿಗಾಗಿ **Article** 4, 6 ಮತ್ತು 14 ರಲ್ಲಿ ಇದ್ದ ಆರೋಪಿತರು ಮಾತನಾಡಿರುವ ಸಂಬಾಷಣೆಯನ್ನು ಒಂದು ಬಿಳಿ ಹಾಳೆಯಲ್ಲಿ ಲಿಖಿತ ರೂಪಕ್ಕೆ ಇಳಿಸಿ ಅದನ್ನು ಆರೋಪಿತರಿಗೆ ನೀಡಿ 3 ಬಾರಿ ಪ್ರತ್ಯೇಕವಾಗಿ ಓದುವಂತೆ ತಿಳಿಸಿ, ನಂತರ ಅದನ್ನು ಡಿಜಿಟಲ್ ವಾಯಿಸ್ ರೆಕಾರ್ಡಿನಲ್ಲಿ ರೆಕಾರ್ಡ್ ಮಾಡಲಾಯಿತು. ಡಿಜಿಟಲ್ ವಾಯ್ಸ್ ರೆಕಾರ್ಡ್ ನಲ್ಲಿ ರೆಕಾರ್ಡ್ ಮಾಡಿದ ಸಂಭಾಷಣೆಯನ್ನು ಲ್ಯಾಪ್ ಟಾಪ್ ಗೆ ಹಾಕಿ, ಸಿಡಿಯಲ್ಲಿ ಕಾಪಿ ಮಾಡಿ, ಸದರಿ ಸಿಡಿಯ ಮೇಲರ್ ನಲ್ಲಿ ಹಾಕಿ, ಒಂದು ಕವರಿಗೆ ಹಾಕಿ, ಒಂದು ಲೇಬಲ್ ಅಂಟಿಸಿ, ಅದಕ್ಕೆ ನಾನು ಮತ್ತು ಪಂಚರು ಸಹಿ ಮಾಡಿರುತ್ತೇವೆ. ಸದರಿ ಕವರ್ ನ್ನು **A** ಎಂಬ ಅಕ್ಷರದಿಂದ ಸೀಲ್ ಮಾಡಿ ಅದಕ್ಕೆ **Article**-16 ಎಂದು ಗುರುತಿಸಲಾಗಿರುತ್ತದೆ. ನಂತರ ಮೇಲ್ಕಂಡ ನಡಾವಳಿಗೆ ಉಪಯೋಗಿಸಿದ **A** ಎಂಬ ಸೀಲನ್ನು, 3 ಬಿಳಿ ಹಾಳೆಗಳ ಮೇಲೆ

ಮಾದರಿ ಸೀಲನ್ನು ಪಡೆದು, ಪಂಚ–1 ರವರಿಗೆ ನೀಡಿ, ಅವರ ಬಳಿ ಇಟ್ಟುಕೊಂಡು, ವಿಚಾರಣಾ ಕಾಲದಲ್ಲಿ ಹಾಜರುಪಡಿಸುವಂತೆ ಸೂಚಿಸಿರುತ್ತೇನೆ.

31. ಆನಂತರ ಆರೋಪಿತರಿಗೆ ಪ್ರಕರಣದ ಬಗ್ಗೆ ಸಮಜಾಯಿಸಿ ಏನಾದರೂ ಇದ್ದರೇ ಬರೆದುಕೊಡುವಂತೆ ತಿಳಿಸಿದ್ದು, ಅದರಂತೆ ಸದರಿಯವರು ಸಮಜಾಯಿಷಿಯನ್ನು ಆರೋಪಿತರೇ ಬರೆದುಕೊಟ್ಟಿರುತ್ತಾರೆ. ಸದರಿ ವಿಚಾರವನ್ನು ಮಹಜರಿನಲ್ಲಿ ನಮೂದಿಸಲಾಗಿರುತ್ತದೆ. ಸದರಿ ಸಮಜಾಯಿಷಿಯ ಮೇಲೆ ನಾನು ಮತ್ತು ಪಂಚರು ಸಹಿ ಹಾಕಿರುತ್ತೇವೆ. ಸಾಕ್ಷಿಯೂ ಆರೋಪಿತರು ನೀಡಿದ್ದ ಸಮಜಾಯಿಸಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಶಾನೆ ಡಿ–6 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ.

32. ನಂತರ ಪಿರ್ಯಾದುದಾರರು ಮತ್ತು ಪಂಚ–2 ರವರಿಗೆ ಸಮಜಾಯಿಸಿಯನ್ನು ಓದಿ ತಿಳಿಸಲಾಗಿ, ಸಮಜಾಯಿಸಿ ಸುಳ್ಳು ಎಂದು ಪಿರ್ಯಾದುದಾರರು ತಿಳಿಸಿ, ತಾನು ಅರ್ಜಿ ನೀಡಿ 6 ತಿಂಗಳಾಗಿದ್ದು, ದಿಃ– 04.09.2018 ರಂದು ತಾನು ಫೋನ್ ಮಾಡಿದ ನಂತರ ಆರೋಪಿ ತಮ್ಮ ಮನೆಯ ಬಳಿ ಬಂದು 15,000 ರೂ.ಗಳಿಗೆ ಒತ್ತಾಯಿಸಿದ್ದು, ಅನಂತರ 12,000 ರೂ.ಗಳನು ಕೊಡುವಂತೆ ತಿಳಿಸಿ, ಬಿಲ್ ಹಾಕುವ ಬಗ್ಗೆ ಕೇಳಿದಾಗ ಬಿಲ್ ಯಾರಾದರೂ ಹಾಕಿಕೊಡುತ್ತಾರೆ ಎಂದು ಹೇಳಿದರು. ಈ ದಿನವೂ ಸಹ ತನ್ನಿಂದ ಲಂಚದ ಹಣವನ್ನು ಪಡೆದು ಯಾರಿಗೂ ಹೇಳಬೇಡಿ ಎಂದು ಹೇಳಿರುತ್ತಾರೆ. ಆರೋಪಿ ಬರೆದುಕೊಟ್ಟ ಸಮಜಾಯಿಷಿ ಸುಳ್ಳು ಎಂದು ತಿಳಿಸಿದರು. ನಂತರ ಪಂಚ–2 ರವರು ಆರೋಪಿತರು ಪಿರ್ಯಾದುದಾರರ ಬಳಿ

ಲಂಚದ ಹಣವನ್ನು ಪಡೆದು ಎರಡೂ ಕೈಗಳಿಂದ ಎಣಿಸಿ ಅವರು ಧರಿಸಿದ ಪ್ಯಾಂಟಿಗೆ ಹಾಕಿಕೊಂಡಿದ್ದನ್ನು ತಾನು ಕಣ್ಣಾರೆ ಕಂಡಿರುತ್ತೇನೆ ಎಂದು ತಿಳಿಸಿದರು.

33. ನಂತರ ಆರೋಪಿಯನ್ನು ದಸ್ತಗಿರಿ ಮಾಡಿ ಆರೋಪಿತರಿಗೆ ತಿಳುವಳಿಕೆ ಪತ್ರವನ್ನು ಜಾರಿ ಮಾಡಿರುತ್ತೇನೆ. ಸಾಕ್ಷಿಯೂ ಆರೋಪಿತರವರಿಗೆ ನೀಡಿದ ದಸ್ತಗಿರಿ ತಿಳುವಳಿಕೆ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ–35 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ–35(ಎ) ಎಂದು ಗುರುತಿಸಲಾಯಿತು. ಅದೇ ಸಮಯದಲ್ಲಿ ಚಾ.ಸಾಃ4 ರವರಿಗೂ ಸಹ ಆರೋಪಿಯ ದಸ್ತಗಿರಿಯ ತಿಳುವಳಿಕೆ ಪತ್ರವನ್ನು ನೀಡಿರುತ್ತೇನೆ. ಸಾಕ್ಷಿಯು ಸದರಿ ತಿಳುವಳಿಕೆ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಶಾನೆ ಪಿ–23 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ–23(ಬಿ) ಎಂದು ಗುರುತಿಸಲಾಯಿತು.

34. ನಂತರ ಪಿರ್ಯಾದುದಾರರಿಗೆ ಸಂಬಂಧಿಸಿ ದಾಖಲಾತಿಗಳನ್ನು ಹಾಜರುಪಡಿಸುವಂತೆ ಆರೋಪಿತರಿಗೆ ಸೂಚಿಸಿದಾಗ, ಆರೋಪಿ ಅದೇ ರೂಮಿನ ಎದುರುಗಡೆ ಇರುವ ಕಾರ್ಯದರ್ಶಿ ಎಂದುನಾಮಫಲಕ ಇರುವ ಕೊಠಡಿಯ ಅಲ್ಮೇರಾದಲ್ಲಿ ಇರುವುದಾಗಿ ತಿಳಿಸಿದರು. ನಂತರ ನನ್ನ ಸೂಚನೆ ಮೇರೆಗೆ ಆರೋಪಿ ಪಂಚರ ಸಮಕ್ಷಮ ಅಲ್ಮೇರಾ ತೆರೆದು ಒಂದು ಕಡತವನ್ನು ಹಾಜರುಪಡಿಸಿದರು. ಸದರಿ ಕಡತಗಳು ಪಿರ್ಯಾದುದಾರರಿಗೆ ಸಂಬಂಧಿಸಿದ್ದು ಅವುಗಳನ್ನು ಸ್ಥಳದಲ್ಲಿ ಪಿಡಿಒರವರಿಗೆ ನಡಾವಳಿಯ ಕಡತಗಳನ್ನು ಮತ್ತು ಹಾಜರಾತಿ ಕಡತಗಳನ್ನು ಹಾಜರುಪಡಿಸುವಂತೆ ಸೂಚಿಸಿದ್ದು, ಅವರು ಹಾಜರುಪಡಿಸಿದ್ದ ಕಡತಗಳನ್ನು ಎಲ್ಲಾ ದಾಖಲಾತಿಗಳನ್ನು ಅದೇ ಕಚೇರಿಯಲ್ಲಿದ್ದ ಜೆರಾಕ್ಸ ಯಂತ್ರದಿಂದ ಜೆರಾಕ್ಸ

ಮಾಡಿಕೊಳ್ಳಲಾಯಿತು. ಸದರಿ ಒಟ್ಟು 12 ದಾಖಲಾತಿಗಳ ವಿವರಗಳನ್ನು ಟ್ರ್ಯಾಪ್ ಮಹಜರಿನಲ್ಲಿ ನಮೂದಿಸಿರುತ್ತೇನೆ. ಸದರಿ ಕಡತಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ಪುಟಸಂಖ್ಯೆ-103 ರಿಂದ 157 ರವರೆಗೆ ಕಡತಗಳನ್ನು ನೋಡಿ ಗುರುತಿಸಿದ್ದು, ಸದರಿ ಕಡತಗಳನ್ನು ಒಟ್ಟಾರೆಯಾಗಿ ನಿಶಾನೆ ಪಿ-36 ಎಂದು ಗುರುತಿಸಲಾಯಿತು. ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಶಾನೆ ಪಿ-36(ಎ) ಎಂದು ಗುರುತಿಸಲಾಯಿತು.

35. ಮೇಲ್ಕಂಡ ದಾಖಲಾತಿಗಳಿಗೆ ನಾನು ಪಂಚರು ಸಹಿ ಮಾಡಿ ಪಿಡಿಒರವರಿಂದ ದೃಡೀಕರಣ ಪಡೆದು ವಶಕ್ಕೆ ಪಡೆದುಕೊಂಡಿರುತ್ತೇವೆ. ನಂತರ ಮೂಲ ದಾಖಲಾತಿಗಳನ್ನು ಪಿಡಿಒರವರಿಗೆ ನೀಡಿ, ಅದನ್ನು ವಿಚಾರಣೆ ಕಾಲದಲ್ಲಿ ಹಾಜರುಪಡಿಸುವಂತೆ ತಿಳಿಸಲಾಯಿತು. ಸದರಿ ಕಚೇರಿಯಲ್ಲಿ ಸಿಸಿ ಕ್ಯಾಮೆರಾವನ್ನು ಅಳವಡಿಸಿದ್ದು, ಅವುಗಳು ದುರಸ್ಥಿಯಲ್ಲಿರುವುದಾಗಿ ತಿಳಿಸಿದರು.

36. ನಂತರ ಲೋಕೋಪಯೋಗಿ ಇಲಾಖೆಗೆ ಸೇರಿದ ಇಂಜಿನಿಯರ್ ರವರನ್ನು ಕರೆಯಿಸಿ ಅಲ್ಲಿಗೆ ಕಿರಿಯ ಇಂಜಿನಿಯರ್ ರವರು ಬಂದು ಅವರ ಕಡೆಯಿಂದ ಸ್ಥಳದ ಕಚ್ಚಾ ನಕಾಶೆಯನ್ನು ಪಂಚಃ-2 ರವರು ತೋರಿಸಿದ ಮೇರೆಗೆ ನಕಾಶೆಯನ್ನು ತಯಾರಿಸಲಾಯಿತು. ಸಾಕ್ಷಿಯು ಕಚ್ಚಾ ನಕಾಶೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ-37 (ಪುಟಸಂಖ್ಯೆ-44) ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ-37(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಕೃತ್ಯ ನಡೆದ ಸ್ಥಳದ ನಕಾಶೆಯನ್ನು ತಯಾರಿಸಿಕೊಡುವಂತೆ ನೀಡಿದ ಕೋರಿಕೆ ಪತ್ರವನ್ನು ನೋಡಿ

ಗುರುತಿಸಿದ್ದು, ಅದನ್ನು ನಿಶಾನೆ ಪಿ–38 (ಪುಟಸಂಖ್ಯೆ-68) ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ–38(ಎ) ಎಂದು ಗುರುತಿಸಲಾಯಿತು.

37. ನಂತರ ಮಹಜರ್ ನಡಾವಳಿಯ ಕಾಲದಲ್ಲಿ ಎಲ್ಲವನ್ನು ಚಾಸಾ.19 ರವರಿಂದ ಪೋಟೋವನ್ನು ತೆಗೆಸಲಾಗಿರುತ್ತದೆ. ಸದರಿ ಪೋಟೋಗಳನ್ನು ಸಾಕ್ಷಿಯ ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ.11 ರಿಂದ 19 ಎಂದು ಗುರುತಿಸಲಾಗಿರುತ್ತದೆ. ಪ್ರತಿ ಪೋಟೋವಿನ ಹಾಳೆಯ ಮೇಲೆ ನನ್ನ ಸಹಿ ಇರುತ್ತದೆ. ಸದರಿ ಮಹಜರನ್ನು ಬೆಳಿಗ್ಗೆ 11.15 ಗಂಟೆಯಿಂದ ಮದ್ಯಾಹ್ನ 3 ಗಂಟೆಯವರೆಗೆ ಸಿದ್ದಲಿಂಗಪುರ, ಗ್ರಾಮ ಪಂಚಾಯಿತಿ ಕಾರ್ಯಾಲಯದಲ್ಲಿ ಜರುಗಿಸಲಾಗಿರುತ್ತದೆ. ಆ ಸಮಯದಲ್ಲಿ ಯಾವುದೇ ವಿದ್ಯುಚ್ಛಕ್ತಿ ಸರಬರಾಜು ಅಡಚಣೆ ಆಗಿರುವುದಿಲ್ಲ ಹಾಗೂ ಕಚೇರಿಯಲ್ಲಿ ಯುಪಿಎಸ್ ವ್ಯವಸ್ಥೆ ಇರುತ್ತದೆ. ಸದರಿ ಮಹಜರಿಗೆ ಪಂಚರು, ಪಿರ್ಯಾದುದಾರುರು, ಆರೋಪಿ, ಚಾ.ಸಾಃ4, ಸಿಬ್ಬಂದಿಯವರು ಸಹಿ ಹಾಕಿರುತ್ತೇವೆ. ಸಾಕ್ಷಿಯು ಮಹಜರನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಶಾನೆ ಪಿ–20 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ–20(ಇ) ಎಂದು ಗುರುತಿಸಲಾಯಿತು. ನಂತರ ಟ್ರ್ಯಾಪ್ ಮಹಜರ್ ಕಾಲದಲ್ಲಿ ಅಮಾನತ್ತುಪಡಿಸಿಕೊಂಡ ವಸ್ತುಗಳನ್ನು ಠಾಣಾ ಮಾಲುಪಟ್ಟಿ ಸಂಖ್ಯೆ–18/2018 ರಲ್ಲಿ ನೋಂದಾಯಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಯು ಠಾಣಾ ಮಾಲುಪಟ್ಟಿಸಂಖ್ಯೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ–39 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ–39(ಎ) ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಮಧ್ಯಾಹ್ನ 2 ಗಂಟೆ ಆಗಿದ್ದು ನ್ಯಾಯಾಲಯದ ಅವಧಿ ಮುಗಿದಿರುವುದರಿಂದ ವಿಚಾರಣೆಯನ್ನು ಮುಂದೂಡಲಾಯಿತು**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ
Sd/-
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.

**ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ-**

**38.** ನಂತರ ಠಾಣೆಗೆ ವಾಪಸಾಗಿ ದಸ್ತಗಿರಿ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ಆರೋಪಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ದಸ್ತಗಿರಿ ಮಾಡಿದ ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**39.** ದಿಃ-07.09.2018 ರಂದು ಪಿರ್ಯಾದುದಾರರ ಮರು ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ಅದೇ ರೀತಿ ಚಾ.ಸಾಃ2 ಮತ್ತು 3 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ ಮತ್ತು ಚಾ.ಸಾಃ9 ರವರ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ಠಾಣಾ ಸಿಬ್ಬಂದಿಗಳಾದ ಚಾ.ಸಾಃ13, 14 ಮತ್ತು 17 ರವರ ಹೇಳಿಕೆಯನ್ನು

ದಾಖಲಿಸಿಕೊಂಡಿರುತ್ತೇನೆ. ಎಕ್ಸಿಕ್ಯೂಟಿವ್ ಆಫೀಸರ್ ಮೈಸೂರುರವರಿಗೆ ಆರೋಪಿತರ ಸೇವಾ ವಿವರದ ಮಾಹಿತಿಯನ್ನು ಕೋರಿ ಪತ್ರ ಬರೆದಿದ್ದು, ಅದೇ ದಿನ ಮಾಹಿತಿಯನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿಯು ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ನೀಡಿದ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ–26(ಬಿ) ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ–26 (ಬಿ)(ಎ) ಎಂದು ಗುರುತಿಸಲಾಯಿತು. ಅದೇ ದಿನ ಕಾರ್ಯನಿರ್ವಾಹಕ ಅಧಿಕಾರಿಯವರು ಪತ್ರದೊಂದಿಗೆ ದಾಖಲೆಗಳನ್ನು ನೀಡಿರುತ್ತಾರೆ. ಸಾಕ್ಷಿಯು ಕಾರ್ಯ ನಿರ್ವಾಹಕ ಅಧಿಕಾರಿಯವರ ಪತ್ರವನ್ನು ಮತ್ತು ದಾಖಲೆಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಶಾನೆ ಪಿ–27(ಬಿ) (ಪುಟಸಂಖ್ಯೆ–72), ದಾಖಲೆಗಳು (ಪುಟಸಂಖ್ಯೆ–73 ರಿಂದ 84) ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ–27(ಬಿ)(ಎ) ಎಂದು ಗುರುತಿಸಲಾಯಿತು.

40. ದಿಃ– 10.09.2018 ರಂದು ಪಿರ್ಯಾದುದಾರರ ಮುಂದುವರೆದ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ನಂತರ ಚಾ.ಸಾಃ4, 16, 18, 19 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ದಿಃ– 11.09.2018 ರಂದು ಚಾ.ಸಾಃ5, 6 ಮತ್ತು 8 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ಪಿಡಬ್ಲ್ಯೂಡಿ, ಜೆ.ಇ ರವರು ತಮ್ಮ ಪತ್ರದ ಜೊತೆಗೆ ನಕಾಶೆಯನ್ನು ಕಳುಹಿಸಿಕೊಟ್ಟಿದ್ದು, ಅದನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಯು ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ–40 ಎಂದು, ಸಾಕ್ಷಿಯ ಸಹಿಯನ್ನು

ನಿಶಾನೆ ಪಿ–40(ಎ) ಎಂದು ಗುರುತಿಸಲಾಯಿತು. ನಕಾಶೆಯನ್ನು ನಿಶಾನೆ ಪಿ–41 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ–41(ಎ) ಎಂದು ಗುರುತಿಸಲಾಯಿತು.

41. ದಿಃ– 26.09.2018 ರಂದು ರಾಸಾಯನಿಕ ಪರೀಕ್ಷೆಗೆ ಒಳಪಡಿಸಲು **Article No**.3, 8, 9, 10 ಮತ್ತು 11 ರಾಸಾಯನಿಕ ವಿಶ್ಲೇಷಣಾ ವರದಿಯನ್ನು ಕೋರಿ ಸಾರ್ವಜನಿಕ ಆರೋಗ್ಯ ಸಂಸ್ಥೆ, ರಾಸಾಯನಿಕ ಪರೀಕ್ಷಕರು, ಬೆಂಗಳೂರು ರವರಿಗೆ ಮೇಲಾಧಿಕಾರಿಗಳ ಸಮುಚಿತ ಮಾರ್ಗದಲ್ಲಿ ಠಾಣಾ ಸಿಬ್ಬಂದಿ ಚಾ.ಸಾಃ15 ರವರ ಮುಖಾಂತರ ಕಳುಹಿಸಿಕೊಟ್ಟಿರುತ್ತೇನೆ ಹಾಗೂ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡಿರುವ ಸಿಡಿಗಳಲ್ಲಿರುವ ಧ್ವನಿ ಪರೀಕ್ಷಿಸಿ ವರದಿ ನೀಡಲು **FSL** ಬೆಂಗಳೂರುರವರಿಗೆ ಮೇಲಾಧಿಕಾರಿಗಳ ಮುಖಾಂತರ ಠಾಣಾ ಸಿಬ್ಬಂದಿ ಚಾ.ಸಾಃ14 ರವರ ಮುಖಾಂತರ ಕಳುಹಿಸಿಕೊಟ್ಟಿರುತ್ತೇನೆ. ಸಾಕ್ಷಿಯು ದಿಃ– 26.09.2018 ರ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ–42 (ಪುಟಸಂಖ್ಯೆ– 52 ರಿಂದ 56) ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ–42(ಎ) ಎಂದು ಗುರುತಿಸಲಾಯಿತು.

42. ದಿಃ–28.09.2018 ರಂದು ಚಾ.ಸಾಃ14 ರವರ ಹೇಳಿಕೆಯನ್ನು ದಾಖಲಿಸಿ ಕೊಂಡಿರುತ್ತೇನೆ. ದಿಃ– 04.10.2018 ರಂದು ಚಾ.ಸಾಃ15 ರವರ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ದಿಃ– 11.10.2018 ರಂದು ಆರೋಪಿ ಮತ್ತು ಪಿರ್ಯಾದಿಯವರ ಮೊಬೈಲ್ ಸಂಖ್ಯೆಗಳ ಸಿಡಿಆರ್ ಮತ್ತು ಕ್ಯಾಪ್ ಪಾರ್ಮ್ ಗಳನ್ನು ಕೋರಿ

ಪತ್ರವನ್ನು ಪೊಲೀಸ್ ಸೂಪರಿಂಟೆಂಡ್ ಪತ್ರವನ್ನು ಬರೆದು ಪೊಲೀಸ್ ಸೂಪರಿಂಟೆಂಡ್ ರವರ ಮುಖಾಂತರ ಕಳುಹಿಸಿಕೊಟ್ಟಿರುತ್ತೇನೆ.

43. ದಿಃ– 20.12.2018 ರಂದು ಸಿಡಿಆರ್ ಮತ್ತು ಕ್ಯಾಪ್ ಪಾರ್ಮ್ ಗಳನ್ನು ಐಡಿಯಾ ಮತ್ತು ಏರ್ ಟೆಲ್ ಕಂಪನಿಗಳಿಂದ ಪಡೆದುಕೊಂಡಿರುತ್ತೇನೆ. ಸಾಕ್ಷಿಯು ಐಡಿಯಾ ಕಂಪನಿಯ ದಾಖಲೆಗಳನ್ನು ನೋಡಿ ಗುರುತಿಸಿದ್ದು ಅದನ್ನು ನಿಶಾನೆ ಪಿ–43 ಎಂದು (ಪುಟಸಂಖ್ಯೆ–86 ರಿಂದ 91), ಸಾಕ್ಷಿಯ ಸಹಿಯನ್ನು ನಿಶಾನೆ ಪಿ–43(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಏರ್ ಟೆಲ್ ಕಂಪನಿಯ ದಾಖಲೆಗಳನ್ನು ನೋಡಿ ಗುರುತಿಸಿದ್ದು ಅದನ್ನು ನಿಶಾನೆ ಪಿ–44 ಎಂದು (ಪುಟಸಂಖ್ಯೆ–92 ರಿಂದ 97), ಸಾಕ್ಷಿಯ ಸಹಿಯನ್ನು ನಿಶಾನೆ ಪಿ–44(ಎ) ಎಂದು ಗುರುತಿಸಲಾಯಿತು. ಸದರಿ ಎರಡೂ ನಂಬರ್ ಗಳು ಆರೋಪಿ ಮತ್ತು ಪಿರ್ಯಾದುದಾರರ ಹೆಸರಿನಲ್ಲಿರುತ್ತವೆ.

44. ದಿಃ– 20.12.2018 ರಂದು ರಾಸಾಯನಿಕ ವಿಶ್ಲೇಷಣಾ ವರದಿ ಮತ್ತು ಅಡಕಗಳನ್ನು ಮೇಲಾದಿಕಾರಿಯವರ ಮುಖಾಂತರ ಪಡೆದುಕೊಂಡು ಕಡತಕ್ಕ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಯು ಜ್ಞಾಪನವನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ–45 (ಪುಟಸಂಖ್ಯೆ–57) ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ–45 (ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ದಿಃ– 26.09.2018 ರ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ–46 (ಪುಟಸಂಖ್ಯೆ–58, 59) ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ–46(ಎ) ಎಂದು ಗುರುತಿಸಲಾಯಿತು.

45. 03.01.2019 ರಂದು ಕಾರ್ಯ ನಿರ್ವಾಹಕ ಅಧಿಕಾರಿ,ತಾಲ್ಲೂಕು ಪಂಚಾಯಿತ್ ರವರಿಗೆ ಆರೋಪಿಗೆ ಸಿದ್ದಲಿಂಗ ಪುರ ಗ್ರಾಮ ಪಂಚಾಯಿತಿಗೆ ವರ್ಗಾವಣೆ ಆದ ಆದೇಶದ ಬಗ್ಗೆ ಮತ್ತು ಅವರಿಗೆ ಕಾರ್ಯ ಹಂಚಿಗೆ ಮಾಡಿದ ಬಗ್ಗೆ ದಾಖಲೆಗಳನ್ನು ಪೂರೈಸುವಂತೆ ಕೋರಿಕೆ ಪತ್ರವನ್ನು ಸಲ್ಲಿಸಿರುತ್ತೇನೆ. ಸಾಕ್ಷಿಯು ಕೋರಿಕೆ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ–47 (ಪುಟಸಂಖ್ಯೆ–187) ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ–47(ಎ) ಎಂದು ಗುರುತಿಸಲಾಯಿತು. ಅದೇ ದಿನ ಪಿಡಿಓ, ಸಿದ್ದಲಿಂಗಪುರ ಗ್ರಾಮ ಪಂಚಾಯಿತಿರವರಿಗೆ ಸಾಮಾನ್ಯ ಸಭೆಯ ನಡಾವಳಿಗಳನ್ನು ನೀಡುವಂತೆ ನೀಡಿ ಪತ್ರ ಬರೆದಿರುತ್ತೇನೆ . ಸಾಕ್ಷಿಯು ಕೋರಿ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ–48 (ಪುಟ ಸಂಖ್ಯೆ–158) ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ–48(ಎ) ಎಂದು ಗುರುತಿಸಲಾಯಿತು.

46. ದಿಃ– 05.01.2019 ರಂದು ಕಾರ್ಯ ನಿರ್ವಾಹಕ ಅಧಿಕಾರಿ ತಾಲ್ಲೂಕು ಪಒಂಚಾಯಿತಿಗೆ ಆರೋಪಿ ವರ್ಗಾವಣೆ ಆದ ಬಗ್ಗೆ ಮತ್ತು ಕಾರ್ಯ ಹಂಚಿರುವ ಬಗ್ಗೆ ಮಾಹಿತಿಯನ್ನು ನೀಡಿರುತ್ತಾರೆ. ಸಾಕ್ಷಿಯು ಸದರಿ ದಾಖಲಗಳನ್ನು ನೋಡಿ ಗುರುತಿಸಿದ್ದು, ನಿಶಾನೆ ಪಿ–49 (ಪುಟ ಸಂಖ್ಯೆ–188, 190 ರಿಂದ 199 ರವರೆಗೆ) ಎಂದು ಗುರುತಿಸಲಾಯಿತು.

47. ಅದೇ ದಿನ ಸಿದ್ದಲಿಂಗಪುರ ಗ್ರಾಮ ಪಂಚಾಯಿತಿ ಪಿಡಿಒರವರಿಂದ ಸಭೆಗಳ ನಡಾವಳಿಗಳಿಗೆ ಸಂಬಂಧಪಟ್ಟ ದಾಖಲೆಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.ಸಾಕ್ಷಿಯು (ಪುಟ ಸಂಖ್ಯೆ–159 ರಿಂದ 183) ರವರೆಗೆ ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ನಿಶಾನೆ

ಪಿ–50 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ–50(ಎ) ಎಂದು ಗುರುತಿಸಲಾಯಿತು. ಅದೇ ದಿನ ಚಾ.ಸಾಃ4 ರವರ ಮುಂದುವರೆದ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ.

48. ದಿಃ– 26.03.2019 ರಂದು ಸರ್ವೇ ನಂಬರ್ಃ– 99/29 ರ ಸ್ವತ್ತಿನ ಬಾಬ್ತು ಎಷ್ಟು ಕಂದಾಯ ಬಾಕಿ ಇರುವ ಬಗ್ಗೆ ಮತ್ತು ಗ್ರಾಮ ಪಂಚಾಯಿತಿ ಕಟ್ಟಡ ಸರ್ಕಾರಿ ಕಟ್ಟಡವೇ ಅಥವಾ ಬಾಡಿಗೆ ಕಟ್ಟಡವೇ ಎಂದು ಮಾಹಿತಿ ನೀಡುವಂತೆ ಪಿಡಿಒರವರಿಗೆ ಕೋರಿಕೆ ಪತ್ರವನ್ನು ಸಲ್ಲಿಸಿರುತ್ತೇನೆ. ಸಾಕ್ಷಿಯು ಕೋರಿಕೆ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ–51 (ಪುಟ ಸಂಖ್ಯೆ–184) ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ–51(ಎ) ಎಂದು ಗುರುತಿಸಲಾಯಿತು. ಅದೇ ದಿನ ಪಿಡಿಒರವರು ದಾಖಲಾತಿಗಳನ್ನು ನೀಡಿದ್ದು ಅವುಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಯು ತಗಾದೆ ನೋಟೀಸನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಶಾನೆ ಡಿ–2 ಎಂದು ಗುರುತಿಸಲಾಗಿದ್ದು, ಸಾಕ್ಷಿಯು ಡಿಮ್ಯಾಂಡ್ ರಿಜಿಸ್ಟರನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ–52 ಎಂದು (ಪುಟಸಂಖ್ಯೆ–186) ಸಾಕ್ಷಿಯ ಸಹಿಯನ್ನು ನಿಶಾನೆ ಪಿ–52(ಎ) ಎಂದು ಗುರುತಿಸಲಾಯಿತು.

49. ದಿಃ– 10.04.2019 ರಂದು ಪಿರ್ಯಾದಿದಾರರ ಸ್ವತ್ತಿಗೆ ಸಂಬಂಧಪಟ್ಟಂತೆ ತಗಾದೆ ನೋಟೀಸಿನ್ನು ನೀಡಿದ್ದು, ಪಿರ್ಯಾದುದಾರರು ಪಾವತಿಸಬೇಕಾದ ಸರಿಯಾದ ಕಂದಾಯ ಬಾಕಿ ಯಾವುದು ಹಾಗೂ ಕಂದಾಯ ನಿಗದಿ ಮಾಡಲು ಅನುಸರಿಸುವ ಮಾನದಂಡ ಯಾವುದು ಎಂಬುದರ ಬಗ್ಗೆ ಮಾಹಿತಿ ಕೋರಿ ಪಿಡಿಒರವರಿಗೆ ಕೋರಿಕೆ ಪತ್ರವನ್ನು

ಸಲ್ಲಿಸಿರುತ್ತೇನೆ. ಸಾಕ್ಷಿಯು ಕೋರಿಕೆ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಶಾನೆ ಪಿ–53 (ಪುಟಸಂಖ್ಯೆ–200) ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ–53(ಎ) ಎಂದು ಗುರುತಿಸಲಾಯಿತು. ಅದೇ ದಿನಪಿಡಿಒರವರು ದಾಖಲಾತಿಗಳನ್ನು ನೀಡಿದ್ದು, ಅವುಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಯು ದಾಖಲೆಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಶಾನೆ ಪಿ–54 (ಪುಟ ಸಂಖ್ಯೆ–201 ರಿಂದ 214) ಎಂದು ಗುರುತಿಸಲಾಯಿತು.

50. ಅದೇ ದಿನ ಚಾ.ಸಾ4 ರವರ ಮುಂದುವರೆದ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ಚಾ.ಸಾ:7 ರವರ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ಈ ಪ್ರಕರಣದಲ್ಲಿ ಶೀಲಾವತಿ, ಪುಷ್ಪಲತಾ, ಕುಮಾರ್ ಆರಾಧ್ಯ, ವಿನಯ್ ಮತ್ತು ಈ ಪ್ರಕರಣದಲ್ಲಿ ನನ್ನ ನಿರ್ವಾಹಣೆ ಬಗ್ಗೆ ಕಲಂ 65(ಬಿ) ಅಡಿಯ ಪ್ರಮಾಣ ಪತ್ರವನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತೇನೆ. ಸಾಕ್ಷಿಯು ಶೀಲಾವತಿರವರ ಪ್ರಮಾಣ ಪತವನ್ನು ನೋಡಿ ಗುುರತಿಸಿದ್ದು, ಅದನ್ನು ನಿಶಾನೆ ಪಿ–55 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ–55(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಪುಷ್ಪಲತಾ ರವರ ಪ್ರಮಾಣ ಪತವನ್ನು ನೋಡಿ ಗುುರತಿಸಿದ್ದು, ಅದನ್ನು ನಿಶಾನೆ ಪಿ–56 (ಪುಟ ಸಂಖ್ಯೆ–301) ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ–56(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಕುಮಾರ್ ಆರಾಧ್ಯ ರವರ ಪ್ರಮಾಣ ಪತವನ್ನು ನೋಡಿ ಗುುರತಿಸಿದ್ದು, ಅದನ್ನು ನಿಶಾನೆ ಪಿ–57 (ಪುಟ ಸಂಖ್ಯೆ–302) ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ–57(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು

ವಿನಯ್ ಪ್ರಮಾಣ ಪತ್ರವನ್ನು ನೋಡಿ ಗುರತಿಸಿದ್ದು, ಅದನ್ನು ನಿಶಾನೆ ಪಿ–58 (ಪುಟ ಸಂಖ್ಯೆಃ–303) ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ–58(ಎ) ಎಂದು ಗುರುತಿಸಲಾಯಿತು.

51. ಸಾಕ್ಷಿಯು ತನ್ನ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ–59 (ಪುಟ ಸಂಖ್ಯೆಃ304, 305) ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ–59(ಎ) ಎಂದು ಗುರುತಿಸಲಾಯಿತು.

52. ದಿಃ– 14.05.2019 ರಂದು ಪ್ರಕರಣದಲ್ಲಿ ಸಕ್ಷಮ ಪ್ರಾಧಿಕಾರದಿಂದ ಅಭಿಯೋಜನಾ ಮಂಜೂರಾತಿಯನ್ನು ಕೊಡಿಸುವಂತೆ ವರದಿಯೊಂದಿಗೆ ಪತ್ರವನ್ನು ಬರೆದಿರುತ್ತೇನೆ.

53. ದಿಃ– 20.09.2019 ರಂದು ಅಭಿಯೋಜನಾ ಮಂಜೂರಾತಿ ಆದೇಶವನ್ನು ಸಕ್ಷಮ ಪ್ರಾಧಿಕಾರದಿಂದ ಬಂದಿದ್ದನ್ನು ಮೇಲಾಧಿಕಾರಿಗಳ ಮುಖಾಂತರ ದಿಃ– 21.09.2019 ರಂದು ಸ್ವೀಕರಿಸಿರುತ್ತೇನೆ. ಸಾಕ್ಷಿಯು ಜ್ಞಾಪನವನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ–60 (ಪುಟ ಸಂಖ್ಯೆಃ–9) ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ–60(ಎ) ಎಂದು ಗುರುತಿಸಲಾಯಿತು.

53. ನಂತರ ದಿಃ– 15.10.2019 ರಂದುಪ್ರಕರಣದಲ್ಲಿ ತನಿಖೆಯನ್ನು ಪೂರೈಸಿ ಆರೋಪಿತನ ವಿರುದ್ಧ ದೋಷಾರೋಪಣಾ ಪಟ್ಟಿ ಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ.

**ಪಾಟೀ ಸವಾಲುಃ– ಆರೋಪಿ ಪರ ವಕೀಲರಿಂದಃ–**

**ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

Sd/–

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮೈಸೂರು.